**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.1002/2017**

**ಪಿಡಬ್ಲ್ಯೂ-8**

**ಸಿಡಬ್ಲ್ಯೂ-10**

| | | |
|---|---|---|
| ಸಾಕ್ಷಿದಾರರ ಹೆಸರು | - | ಎನ್ ಎಂ ಮಲ್ಲೇಶಯ್ಯ |
| ತಂದೆಯ ಹೆಸರು | - | ಮಹಾದೇವ ನಾಯಕ |
| ವಯಸ್ಸು | - | 46 |
| ಕೆಲಸ | - | ಹೆಡ್ ಕಾನ್ಸಟೇಬಲ್, ಟಿ ನರಸೀಪುರ |
| ವಾಸ | - | ಟಿ ನರಸೀಪುರ |

**ದಿನಾಂಕ 18-09-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

15.01.2011 ರಿಂದ ದಿ:17.05.2015 ವರಗೆ ಮುಖ್ಯ ಪೇದೆಯಾಗಿ ಆಗಿ ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:10.06.2013 ರಂದು ಕೆ ಆರ್ ನಗರ ಸರ್ಕಾರಿ ಆಸ್ಪತ್ರೆಯಿಂದ ಬಂದ ಮೆಮೋವನ್ನು ಪಡೆದು ರಾತ್ರಿ 7.30 ಗಂಟೆಯಿಂದ 8.00 ಗಂಟೆಯ ವರೆಗೆ ಆಸ್ಪತ್ರೆಯಲ್ಲಿ ಗಾಯಾಳುವಾದ ಸ್ವಾಮಿಗೌಡ ಇವರ ಹೇಳಿಕೆಯನ್ನು ಪಡೆದು ನಂತರ ಠಾಣೆಗೆ ತೆರಳಿ ಠಾಣಾ ಮೋಕದ್ದಮೆ ನಂ.166/2013 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನವನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಸಾಕ್ಷಿಗೆ ಸದರಿ ದಾಖಲೆಯನ್ನು ತೋರಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನವರದಿಯನ್ನು ಗುರುತಿಸಿದ್ದರಿಂದ ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

ದಿ:11.06.2013 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಸದರಿ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ 4 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ 7 ಮತ್ತು 8 ಇವರ ಸುವಕ್ಷಮದಲ್ಲಿ ಬೆಳಿಗ್ಗೆ 9.30 ರಿಂದ 10.30 ಗಂಟೆ ಸಮಯದಲ್ಲಿ ಸ್ಥಳದ ಮಹಜರ್ ಕ್ರಮವನ್ನು ಜರುಗಿಸಿ ಸ್ಥಳದಲ್ಲಿ ಹಾಜರುಪಡಿಸಿದ ರೀಪರ್ ಪಟ್ಟಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತೆನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ಈಗಾಗಲೆ ನಿಪಿ 3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ರೀಪರ್ ಪಟ್ಟಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಈಗಾಗಲೇ ಮೂಮಾ 1 ಎಂದು ಗುರುತಿಸಲಾಗಿದೆ. ಸದರಿ ಮೂಮಾ 1 ರ ಮೇಲೆ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ಮಾಮಾ 1(ಎ) ಎಂದು ಗುರುತಿಸಲಾಯಿತು. ಸದರಿ ರೀಪರ್ ಪಟ್ಟಿಯನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 118/2013 ರಂತೆ ಆಳವಡಿಸಿ ಮಾಲುಪಟ್ಟಿಯ ಮೇಲೆ ನನ್ನ ಸಹಿ ಇದ್ದು ಸದರಿ

ಮಾಲುಪಟ್ಟಿಯನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6 (ಎ) ಎಂದು ಗುರುತಿಸಲಾಯಿತು. ಕೃತ್ಯನಡೆದ ಸ್ಥಳದ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ನಕ್ಷೆಯನ್ನು ನಿಪಿ 7 ಎಂದು ಹಾಗೂ ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು.

ಚಾಸಾ 2 ರಿಂದ 6 ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ 6 ಪ್ರಾಸಾ 6 ರವರು ನಿಪಿ 4 ರಂತೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ20.06.2013 ರಂದು ಈ ಪ್ರಕಣದ ಗಾಯಾಳು ಚಾಸಾ 2 ರವರ ಹಲ್ಲನ್ನು ಠಾಣೆಗೆ ಮದ್ಯಾಹ್ನ 3.00 ಗಂಟೆಗೆ ತಂದು ಹಾಜರುಪಡಿಸಿದ್ದು 3.00 ಗಂಟೆಯಿಂದ 3.45 ಗಂಟೆ ಸಮಯದಲ್ಲಿ ಪಂಚರಾದ ಚಾಸಾ 4 ಮತ್ತು 8 ಇವರ ಸಮಕ್ಷಮದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ ಸದರಿ ಹಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು.

ಸದರಿ ಹಲ್ಲನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ಮೂಮಾ 2 ಎಂದು ಗುರುತಿಸಲಾಗಿದೆ. ಅದನ್ನು ಮಾಲುಪಟ್ಟಿ ಸಂಖ್ಯೆ 124/2013 ರಂತೆ ತಯಾರಿಸಿರುತ್ತೇನೆ. ಸದರಿ ಮಾಲುಪಟ್ಟಿಯ ಮೇಲೆ ನನ್ನ ಸಹಿ ಇದ್ದು ಸದರಿ ಮಾಲುಪಟ್ಟಿಯನ್ನು ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು.

ನಂತರ ಮುಂದಿನ ತನಿಖೆಗಾಗಿ ಸದರಿ ಪ್ರಕರಣದ ಕಡತಗಳನ್ನು ಚಾಸಾ 11 ಇವರಿಗೆ ನೀಡಿರುತ್ತೇನೆ.

<u>ಪಾಟೀ ಸವಾಲು: ಶ್ರೀ. ಕೆ ಎನ್ ಎಸ್ ವಕೀಲರಿಂದ ಆರೋಪಿ ಪರ ವಕೀಲರುಃ</u>

ಸದರಿ ಪ್ರಕರಣದಲ್ಲಿ 3 ಜನ ಗಾಯಾಳುಗಳಿದ್ದು ನಾನು ಒಬ್ಬ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡ ನಂತರ ಸದರಿ ಹೇಳಿಕೆಯ ಮೇಲೆ ಪ್ರಕರಣ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿ.

ನನಗೆ ಮೂರು ಜನ ಗಾಯಾಳುಗಳ ಹೇಳಿಕೆಗಳನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ದಿಃ20.06.2013 ರಂದು ಠಾಣೆಯಲ್ಲಿ ನಿಪಿ 2 ರಂತೆ ಅಮಾನತ್ತು ಮಹಜರನ್ನು ಬರೆಯಲು ಸದರಿ ಅಮಾನತ್ತು ಪಡಿಸಿಕೊಂಡ ಹಲ್ಲನ್ನು ಚಾಸಾ 2 ಇವರು ಠಾಣೆಗೆ ತಂದಿರುತ್ತಾರೆ.

ನಾನು ಸದರಿ ಪ್ರಕರಣದ ದೂರನ್ನು ದಿಃ10.06.2013 ರಂದು ಸ್ವೀಕರಿಸಿದ್ದು ಚಾಸಾ 2 ರವರು ಮೂಮಾ 2 ನ್ನು ದಿಃ20.06.2013 ರಂದು ಠಾಣೆಗೆ ಬಂದು ನೀಡಿರುತ್ತಾರೆ.

ಮೂಮಾ 1 ನ್ನು ಸ್ಥಳದಿಂದ ಅಮಾನತ್ತು ಪಡೆದುಕೊಳ್ಳುವ ಸಮಯದಲ್ಲಿ ಮೂಮಾ 2 ನ್ನು ಅದೇ ಸಮಯದಂದು ವಶಕ್ಕೆಪಡೆದುಕೊಳ್ಳಲು ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ಸಮಯದಲ್ಲಿ ಮೂಮಾ 2 ಸ್ಥಳದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

ಚಾಸಾ 2 ರವರು ತಮ್ಮ ಹೇಳಿಕೆಯಲ್ಲಿ 1 ನೇ ಆರೋಪಿ ಇವರು ತಮಗೆ ಕಾಲಿನಿಂದ ಹಲ್ಲಿಗೆ ಒದ್ದಿದ ತಕ್ಷಣವೇ ಹಲ್ಲು ಸದರಿ ಸ್ಥಳದಲ್ಲಿ ಬಿದ್ದು ಹೋಯಿತು ಎಂದು ಹೇಳಿ ಬರೆಸಿದ್ದಾರಾ ಎಂದರೆ ಸಾಕ್ಷಿಯು ಬರೆಸಿದ್ದಾರೆ ಎಂದು ನುಡಿಯುತ್ತಾರೆ.

ಮೂಮಾ 2 ರ ಮೇಲೆ ಸಾಕ್ಷಿದಾರರಾದ ಚಾಸಾ 2, 4 ಹಾಗೂ 8 ರವರ ಸಹಿಗಳನ್ನು ಅವರ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಬಗ್ಗೆ ಸಹಿಗಳನ್ನು ಮಾಡಿಸಿಕೊಂಡಿದ್ದೀರ ಎಂದರೆ ಸಾಕ್ಷಿಯು

ಮೂಮಾ 2 ಕ್ಕೆ ಅಂಟಿಸಿದ ಚೀಟಿಯ ಮೇಲೆ ಪಡೆದುಕೊಂಡಿರುವುದಿಲ್ಲ ಆದರೆ ನಿಪಿ 2 ರ ಮೇಲೆ ಪಡೆದುಕೊಂಡಿರುತ್ತೆನೆ ಎಂದು ನುಡಿಯುತ್ತಾರೆ.

ನಿಪಿ 2 ರಲ್ಲಿ ಒಂದು ಬಿಳಿಯ ಕಂದು ಮಿಶ್ರಿತ ಹಲ್ಲು ಆಗಿದ್ದು ಸದರಿ ಹಲ್ಲು ಪೂರ್ಣವಾಗಿ ಬಿದ್ದಂತೆ ಇರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಮೂಮಾ 2 ನಾನು ದಿ:20.06.2013 ರಂದು ಅಮಾನತ್ತು ಮಹಜರ್ ಮುಖಾಂತರ ವಶಕ್ಕೆಪಡೆದುಕೊಂಡಿರುವ ಹಲ್ಲಾಗಿರುತ್ತದೆ.

ನ್ಯಾಯಾಲಯದ ಮುಂದೆ ಇರುವ ಮೂಮಾ 2 ಹಲ್ಲು ನಾನು ಸದರಿ ಪ್ರಕರಣದಲ್ಲಿ ವಶಕ್ಕೆ ಪಡೆದುಕೊಂಡಂತಹ ಹಲ್ಲು ಅಲ್ಲ  ಹಾಗೂ ಸದರಿ ಹಲ್ಲು ಮೂಲ ಹಲ್ಲಿನ ಗಾತ್ರಕ್ಕೆ ಹೋಲಿಕೆ ಮಾಡಿದರೆ ಶೇಖಡ 25 ಮಾತ್ರ ಹಲ್ಲು ಆಗಿರುತ್ತದೆ ಎಂದರೆ ಸರಿಯಲ್ಲ.

ನಾನು ಸ್ಥಳ ಮಹಜರ್ ಹಾಗೂ ಅಮಾನತ್ತು ಮಹಜರನ್ನು ಮಾಡಬೇಕಾದರೆ ಪಂಚರಿಗೆ ಸಾಕ್ಷಿದಾರರಾಗಲು ಬಾಯಿ ಮಾತಿನಿಂದ ತಿಳಿಸಿರುತ್ತೆನೆ.

ಸಾಮಾನ್ಯವಾಗಿ ಸ್ಥಳ ಮಹಜರ್ ಹಾಗೂ ಅಮನಾತ್ತು ಮಹಜರ್ನ್ನು ಸ್ಥಳದಲ್ಲಿಯೇ ಬರೆದಿದ್ದಾರೆ ಸದರಿ ಮಹಜರ್ಗಳ ಮೇಲೆ ಸಾಕ್ಷಿದಾರರ ಸಹಿಯೊಂದಿಗೆ ಅವರ ತಂದೆಯ ಹೆಸರು ಹಾಗೂ ವಿಳಾಸ ನಮೂದು ಮಾಡಲಾಗುತ್ತದೆ ಎಂದರೆ ಸರಿ.

ಈ ರೀತಿ ಸಂಬಂದಪಟ್ಟವರ ತಂದೆಯ ಹೆಸರು ಹಾಗೂ ವಿಳಾಸಗಳು ನಮೂದು ಇರಲಿಲ್ಲ ಎಂದರೆ ನಾವು ಒಂದು ಬಿಳಿ ಹಾಳೆಯ ಮೇಲೆ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡು ನಂತರ ಅದರಲ್ಲಿ ವಿಷಯವನ್ನು ಭರ್ತಿ ಮಾಡುತ್ತೇವೆ ಎಂದರೆ ಸರಿಯಲ್ಲ.

ನಿಪಿ 2 ಹಾಗೂ 3 ರ ಮೇಲೆ ಈ ರೀತಿ ಸಾಕ್ಷಿದಾರರ ತಂದೆಯ ಹೆಸರು ಹಾಗೂ ವಿಳಾಸ ಇರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ 2 ರವರ ಹೇಳಿಕೆಯನ್ನು ಪ್ರಕರಣದ ದಾಖಲಿಸಿದ ಮಾರನೇ ದಿನದಂದೆ ಪಡೆದುಕೊಂಡಿರುತ್ತೇನೆ. ಚಾಸಾ 2 ರವರು ಅದೇ ದಿನ ತಮ್ಮ ಹೇಳಿಕೆಯಲ್ಲಿ ಹಲ್ಲು ಬಿದ್ದುಹೋಗಿರುವ ಬಗ್ಗೆ ಹೇಳಿದ್ದು  ನಾನು ಅವರಿಗೆ ಸದರಿ ಬಿದ್ದು ಹೋದ ಹಲ್ಲನ್ನು ಠಾಣೆಗೆ ತಂದು ಹಾಜರುಪಡಿಸುವಂತೆ ಹೇಳಿರುತ್ತೇನೆ.

ಚಾಸಾ 2 ರವರು 2ನೇ ಆರೋಪಿ ಒದ್ದ ನಂತರ ಸ್ದಳದಲ್ಲಿಯೇ ಹಲ್ಲು ಬಿತ್ತು ಎಂದು ಹೇಳಿದರೋ ಅಥವಾ ಘಟನೆಯ ನಂತರ ಆಸ್ಪತ್ರೆಗೇ ಚಿಕಿತ್ಸೆಗಾಗಿ ದಾಖಲಾದ ನಂತರ ಆಸ್ಪತ್ರೆಯಲ್ಲೇ ಹಲ್ಲು ಬಿತ್ತೊ ಎನ್ನುವ ಪ್ರಶ್ನೆಗೆ ಸಾಕ್ಷಿಯು 2ನೇ ಆರೋಪಿ ಇವರು ಒದ್ದ ತಕ್ಷಣ ಘಟನಾ ಸ್ಥಳದಲ್ಲಿ ಬಿತ್ತು ಎಂದು ಹೇಳಿರುತ್ತಾರೆ.

ನಾನು ಸ್ಥಳ ಮಹಜರ್ ನಿಪಿ 1 ನ್ನು ಪ್ರಕ್ರಿಯೇಯನ್ನು ಮೊದಲು ಜರುಗಿಸಿ ನಂತರ ಚಾಸಾ 2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೆನೆ. ನಾನು ಘಟನಾ ಸ್ಥಳಂದ ರಿಪೀಸ್ ಪಟಿಯನ್ನು ವಶಕ್ಕೆ ಪಡೆದುಕೊಳ್ಳುವ ಸಮಯದಲ್ಲಿ ಚಾಸಾ 2 ರವರ ಅಕ್ಕ ಪಕ್ಕದ ಮನೆಯವರು ಚಾಸಾ 2 ರವರ ಬಿದ್ದು ಹೋದ ಹಲ್ಲಿನ ಹುಡುಕಾಟ ಮಾಡಿರುವುದಿಲ್ಲ.

ಚಾಸಾ 2 ರವರು ಪಿರ್ಯಾದು ನೀಡಿದ 10 ದಿನದ ನಂತರ ಹಾಜರುಪಡಿಸಿದ ಹಲ್ಲನ್ನು ಎಲ್ಲಿಂದ ತಂದು ಹಾಜರುಪಡಿಸಿದ್ದು ಎಂದು ಕೇಳಿದಾಗ ಅವರು ಘಟನಾ ಸ್ಥಳದಿಂದ ಎಂದು ತಿಳಿಸಿರುತ್ತಾರೆ.

ನಾನು ಸದರಿ ಪ್ರಕರಣದಲ್ಲಿ ಸಂಬಂದಪಟ್ಟ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಾಗೂ ದೂರುದಾರರಿವರ ನಡುವೆ ಯಾವುದೇ ಜಗಳ ಆಗಿರುವುದಿಲ್ಲ ಅವರ ನಡುವೆ ಜಮೀನಿಗೆ ಸಂಬಂದಪಟ್ಟ ವ್ಯಾಜ್ಯವಿದ್ದು ದೂರುದಾರರಿವರು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ನಾನು ಸದರಿ ಪ್ರಕರಣದ ಸತ್ಯಾಸತ್ಯತೆಯನ್ನು ಪರಿಶೀಲಿಸದ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡಿರುತ್ತೆನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದುಕೊಳ್ಳದೇ ಠಾಣೆಯಲ್ಲೀಯೇ ಮಹಜರ್ ಬರೆದು ಸಾಕ್ಷಿಗಳ ಸಹಿಗಳನ್ನು ಪಡೆದುಕೊಂಡಿರುತ್ತೆನೆ ಎಂದರೆ ಸರಿಯಲ್ಲ.

ಸದರಿ ಪ್ರಕರಣವನ್ನು ಬಲಪಡಿಸುವುದಕ್ಕಾಗಿ ಮೂಮಾ 2 ನ್ನು ಸೃಷ್ಟಿ ಮಾಡಿಕೊಂಡು ಯಾವುದೇ ಪ್ರಕರಣದಲ್ಲಿ ಆದ ಮುದ್ದೇ ಮಾಲನ್ನು ತಂದು ಈ ಪ್ರಕರಣದಲ್ಲಿ ಹಾಜರುಪಡಿಸಿ ಅದನ್ನು ಸದರಿ ಪ್ರಕರಣದ ಮುದ್ದೇ ಮಾಲು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ